ಸಂಖ್ಯೆ: ಪಿಇಆರ್:ಕ್ಯಾಬ್:1:ಡಿ:3:59/2021

ನಿರ್ದೇಶಕರವರ ಕಛೇರಿ,
ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ,
ಡಾ:ಎಂ.ಹೆಚ್ ಮರಿಗೌಡ ರಸ್ತೆ
ಬೆಂಗಳೂರು-560 029.
ದಿ:18.2.2021

**ಕಛೇರಿ ಆದೇಶ**

ವಿಷಯ: ಕಿದ್ವಾಯಿ ಸಂಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಸಂಘಗಳನ್ನು ರದ್ದುಗೊಳಿಸುವ ಬಗ್ಗೆ
ಉಲ್ಲೇಖ: ದಿ: 18.1.2021 ರ ಸುತ್ತೋಲೆ ಸಂಖ್ಯೆ: ಸಿಆಸುಇ 6 ಸೇಸವಿ 2005

***

ಸರ್ಕಾರಿ ನೌಕರರ ಸೇವಾ ಸಂಘಗಳಿಗೆ ಸರ್ಕಾರದ ಮಾನ್ಯತೆಯನ್ನು ನೀಡುವುದಕ್ಕೆ ಸಂಬಂದಿಸಿದಂತೆ, ಕರ್ನಾಟಕ ಸಿವಿಲ್ ಸೇವಾ (ಸೇವಾ ಸಂಘಗಳ ಮಾನ್ಯತೆ) ನಿಯಮಗಳು 2015 ನ್ನು ಜಾರಿಗೊಳಿಸಲಾಗಿರುತ್ತದೆ. ಸದರಿ ನಿಯಮಗಳ 3(2)(ಬಿ) ರನ್ವಯ ನಿರ್ದಿಷ್ಟ ವೃಂದ ಅಥವಾ ವರ್ಗಕ್ಕೆ ಸೇರಿರುವ ವ್ಯಕ್ತಿಗಳಲ್ಲಿ ಶೇಕಡ 50 ಕ್ಕಿಂತ ಹೆಚ್ಚು ಸದಸ್ಯತ್ವ ಹೊಂದಿರುವ ಯಾವುದೇ ಸೇವಾ ಸಂಘಕ್ಕೆ ಮಾನ್ಯತೆ ನೀಡಬಹುದಾಗಿದೆ. ಆದರೆ, ಎಲ್ಲಾ ಅಂತಹ ಸರ್ಕಾರಿ ನೌಕರರೂ ಸಂಘದ ಸದಸ್ಯತ್ವಕ್ಕೆ ಅರ್ಹರಾಗಿರುತ್ತಾರೆ. ಅಲ್ಲದೇ ಮಾನ್ಯತೆಯನ್ನು ಇಲಾಖೆಯಲ್ಲಿನ ಪ್ರತಿಯೊಂದು ವೃಂದದಲ್ಲಿ ಒಂದು ಸಂಘಕ್ಕಿಂತ ಹೆಚ್ಚಿನ ಸಂಘಕ್ಕೆ ಅನುಮೋದನೆ ನೀಡತಕ್ಕದ್ದಲ್ಲ. ಹಾಗೂ ಸಂಘವನ್ನು ಜಾತಿ, ಧರ್ಮ, ವಂಶ ಅಥವಾ ಅಂದ ಜಾತಿ, ಧರ್ಮ, ವಂಶ ಇತ್ಯಾದಿ ಒಳಗಿರುವ ಯಾವುದೇ ಸಮೂಹದ ಆಧಾರದ ಮೇಲೆ ರಚಿಸತಕ್ಕದ್ದಲ್ಲ.

ಸರ್ಕಾರಿ ನೌಕರರ ಸೇವಾ ಸಂಘಗಳಿಗೆ ಮಾನ್ಯತೆ ನೀಡುವಾಗ ಸದರಿ ಸಂಘವು ನಿರ್ದಿಷ್ಟ ವೃಂದ ಅಥವಾ ವರ್ಗಕ್ಕೆ ಸೇರಿರುವ ಸೇವಾ ಸಂಘಗಳಿಗೆ ಮಾತ್ರ ಆಡಳಿತ ಇಲಾಖೆಗಳು ಮಾನ್ಯತೆ ನೀಡುವಂತೆ ಮತ್ತು ಈಗಾಗಲೇ ಜಾತಿ, ಧರ್ಮ, ಇತ್ಯಾದಿ ಒಳಗಿರುವ ಯಾವುದೇ ಸಮೂಹದ ಆಧಾರದ ಮೇಲೆ ರಚಿತವಾಗಿರುವ ಸೇವಾ ಸಂಘಗಳ ಮಾನ್ಯತೆಯನ್ನು ರದ್ದುಪಡಿಸುವಂತೆ ಹಾಗೂ ಮಾನ್ಯತೆ ಪಡೆಯದೆ ಚಾಲ್ತಿಯಲ್ಲಿರುವ ಸಂಘಗಳನ್ನು ನಿರ್ಬಂಧಿಸುವಂತೆ ಸರ್ಕಾರ ದಿ:;18.1.2021 ರ ಉಲ್ಲೇಖದ ಸುತ್ತೋಲೆಯಲ್ಲಿ ಸೂಚಿಸಿರುತ್ತದೆ.

ಮುಂದುವರೆದಂತೆ, ಈ ಸಂಸ್ಥೆಯಲ್ಲಿ ಈ ಕೆಳಗಿನ ಒಂಬತ್ತು ಸಂಘಗಳು ಕಾರ್ಯ ನಿರ್ವಹಿಸುತ್ತಿವೆ.

1. ಫ್ಯಾಕಲ್ಟಿ ಅಸೋಸಿಯೇಷನ್
2. ಭಾರತೀಯ ಡಾ:ಬಿ.ಆರ್.ಅಂಬೇಡ್ಕರ್ ವೇದಿಕೆ
3. ಎಸ್.ಸಿ.ಎಸ್.ಟಿ. ಕಲ್ಯಾಣ ಸಂಘ
4. ಕುವೆಂಪು ವೇದಿಕೆ
5. ಕಿದ್ವಾಯಿ ನೌಕರರ ಕಲ್ಯಾಣ ಸಂಘ
6. ವೀರಶೈವ ಸಂಘ
7. ಕಿದ್ವಾಯಿ ಶುಶ್ರೂಷಾದಾದಿಯರ ಕಲ್ಯಾಣ ಸಂಘ
8. ನಾಡಪ್ರಭು ಕೆಂಪೇಗೌಡ ಸಮಿತಿ
9. ಸ್ನಾತಕೋತ್ತರ ಪದವಿಧರ ಗ್ರೂಪ್ ಬಿ ಅಸೋಸಿಯೇಷನ್

ಸಂಸ್ಥೆಯ ಕಾರ್ಯ ಸುವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸಲು ಈ ಸಂಘಗಳಿಂದ ಅಡಚಣೆ ಉಂಟಾಗುತ್ತಿದೆ. ಮಾನ್ಯ ಉಪಮುಖ್ಯಮಂತ್ರಿಗಳಾದ ಡಾ:ಅಶ್ವತ್ಥ್ ನಾರಾಯಣ ಸಿ.ಎನ್. ಅವರು ಅನುಮೋದಿಸಿದಂತೆ ಕಿದ್ವಾಯಿ ಸಂಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಈ ಮೇಲ್ಕಂಡ ಸಂಘಗಳನ್ನು ತಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೂ ರದ್ದುಗೊಳಿಸಲಾಗಿದೆ. ಹಾಗೂ ಈ ಸಂಘಗಳು ಹೊಂದಿರುವ ಕಛೇರಿಯನ್ನು ಕೂಡಲೇ ತೆರವುಗೊಳಿಸಲು ಸೂಚಿಸಲಾಗಿದೆ.

ಮುಖ್ಯ ಆಡಳಿತಾಧಿಕಾರಿಗಳು

ರವರಿಗೆ:1. ವೈದ್ಯಕೀಯ ಅಧೀಕ್ಷಕರು 2. ಆರ್ಥಿಕ ಸಲಹೆಗಾರರು 3.ನಿವಾಸಿ ವೈದ್ಯಾಧಿಕಾರಿಗಳು 4.ಎಲ್ಲಾ ಇಲಾಖಾ ಮುಖ್ಯಸ್ಥರು/ಘಟಕ ಮುಖ್ಯಸ್ಥರು 5. ಮೇಲಿನ ಎಲ್ಲಾ ಸಂಘದ ಅಧ್ಯಕ್ಷರುಗಳು 6.ನಿರ್ದೇಶಕರ ಆಪ್ತ ಸಹಾಯಕರು 7.ಕಛೇರಿ ಪ್ರತಿ